# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಹೆಚ್.ರಸ್ತೆ, ತುಮಕೂರು - 572 103

ದೂರವಾಣಿ : 0816-2270715 ಫ್ಯಾಕ್ಸ್ : 0816-2270719


ಸಂಖ್ಯೆ : ತುವಿ. : ಹ.ವಿ. ಜಾ.ಅ. : ದರಪಟ್ಟಿ : 2021-22/1454 ದಿನಾಂಕ : 20.09.2021

## ದರಪಟ್ಟಿ ಆಹ್ವಾನ

ವಿಷಯ:-2020-21ನೇ ಸಾಲಿನ ತುಮಕೂರು ವಿಶ್ವವಿದ್ಯಾನಿಲಯದ ಜಮಾ, ಖರ್ಚು ಮತ್ತು ಬ್ಯಾಲೆನ್ಸ್ ಷೀಟ್ ಸಿದ್ಧಪಡಿಸಲು ದರಪಟ್ಟಿಯನ್ನು ಆಹ್ವಾನಿಸುವ ಕುರಿತು.

ಉಲ್ಲೇಖ:-ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ:04.09.2021 ಕಂಡಿಕೆ(263)

* * * * *

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ ತುಮಕೂರು ವಿಶ್ವವಿದ್ಯಾನಿಲಯದ 2020-21ನೇ ಸಾಲಿನ ಜಮಾ ಖರ್ಚುಗಳ ಪರಿಶೀಲನೆ ಮಾಡಿ ಟ್ಯಾಲಿ ತಂತ್ರಾಂಶ ಬಳಸಿ ಬ್ಯಾಲೆನ್ಸ್ ಷೀಟ್ ಸಿದ್ಧಪಡಿಸಿ ಸಲ್ಲಿಸುವಂತೆ ಹಾಗೂ 2020-21ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯಕ್ಕೆ ಸರ್ಕಾರದಿಂದ ಸ್ವೀಕೃತವಾದ ಅನುದಾನದ ವಿವಿಧ ಯೋಜನೆಗಳ ಆಡಿಟ್ ಮಾಡಿ ಜಮಾ ಖರ್ಚುಗಳ ಬ್ಯಾಲೆನ್ಸ್ ಷೀಟ್ ಸಿದ್ಧಪಡಿಸಬೇಕಾಗಿದೆ.

ಆದಕಾರಣ ಸದರಿ ಕಾರ್ಯವನ್ನು ನಿರ್ವಹಿಸಲು ಈ ಕೆಳಕಂಡ ಷರತ್ತಿಗೊಳಪಟ್ಟು ದರಪಟ್ಟಿಯನ್ನು ಆಹ್ವಾನಿಸಿದೆ.

ಷರತ್ತುಗಳು :-

1. ಲಕೋಟೆಯ ಮೇಲೆ **"2020-21ನೇ ಸಾಲಿನ ಜಮಾ ಖರ್ಚು ಬ್ಯಾಲೆನ್ಸ್ ಷೀಟ್** ಎಂದು ಸ್ಪಷ್ಟವಾಗಿ ನಮೂದಿಸಬೇಕು.
2. ದರಪಟ್ಟಿಯನ್ನು ಮೇಲ್ಕಂಡ ಎಲ್ಲಾ ಕಾರ್ಯವನ್ನೊಳಗೊಂಡಂತೆ ಒಂದು ವರ್ಷದ ಅವಧಿಗಾಗಿ ಒಟ್ಟು ಮೊತ್ತವನ್ನು ನಮೂದಿಸಬೇಕು.
3. ದರಪಟ್ಟಿಯನ್ನು ಸಲ್ಲಿಸಲು ಕೊನೆಯ ದಿನಾಂಕ : **30.09.2021 ರ ಸಂಜೆ 4.00 ಗಂಟೆ** ಒಳಗೆ ಸಲ್ಲಿಸಬೇಕು.
4. ದರಪಟ್ಟಿಯನ್ನು ದಿನಾಂಕ:**30.09.2021 ರಂದು 5.00** ತೆರೆಯಲಾಗುವುದು ದರಪಟ್ಟಿಗಳನ್ನು **ಹಣಕಾಸು ಅಧಿಕಾರಿಗಳು, ವಿಶ್ವವಿದ್ಯಾನಿಲಯ ಕಾರ್ಯಾಲಯ, ವಿಶ್ವವಿದ್ಯಾನಿಲಯ ಘಟಕ ಕಾಲೇಜು ಆವರಣ, ಬಿ.ಹೆಚ್. ರಸ್ತೆ,** ತುಮಕೂರು ಇವರಿಗೆ ಮುದ್ದಾಂ ಅಥವಾ ಅಂಚೆಯ ಮೂಲಕ ತಲುಪಿಸಬಹುದು. ಅಂಚೆಯ ವಿಳಂಬಕ್ಕೆ ಅಥವಾ ಅಂಚೆಯು ತಲುಪದಿದ್ದಲ್ಲಿ ವಿಶ್ವವಿದ್ಯಾನಿಲಯವು ಜವಾಬ್ದಾರಿಯಾಗಿರುವುದಿಲ್ಲ.
5. ದರಪಟ್ಟಿಯನ್ನು ಯಾವುದೇ ಕಾರಣ ನೀಡದೇ ಅಂಗೀಕರಿಸುವ ಅಥವಾ ತಿರಸ್ಕರಿಸುವ ಪೂರ್ಣ ಹಕ್ಕನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿಕೊಂಡಿದೆ.
6. ಜಮಾ, ಖರ್ಚು & ಬ್ಯಾಲೆನ್ಸ್ ಷೀಟುಗಳನ್ನು 2020-21ನೇ ಸಾಲಿನ ತುಮಕೂರು ವಿಶ್ವವಿದ್ಯಾನಿಲಯದ ಆಯವ್ಯಯದಲ್ಲಿನ ಲೆಕ್ಕ ಶೀರ್ಷಿಕೆಯಂತೆ ಸಿದ್ಧಪಡಿಸುವುದು.
7. ಹೆಚ್ಚಿನ ವಿವರಗಳು ಅಥವಾ ಮಾಹಿತಿಯು ಅಗತ್ಯವಿದ್ದಲ್ಲಿ **ಹಣಕಾಸು ಅಧಿಕಾರಿಗಳು** ಇವರನ್ನು ಸಂಪರ್ಕಿಸಬಹುದು. Office Phone No. 0816-2270715

ಹಣಕಾಸು ಅಧಿಕಾರಿಗಳು
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು.

ಪ್ರತಿಗಳು:

1. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
2. ಮಾನ್ಯ ಕುಲಸಚಿವರ ಆಪ್ತ ಸಹಾಯಕರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
3. ಸಿಸ್ಟಮ್ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
4. ಕಛೇರಿ ಪ್ರತಿ.

K1.2020-21